ಕ್ಯಾಂಪ್‌ನ್ನು ತೆಗೆದುಕೊಂಡಿದ್ದೇವೆ. ಸುಮಾರು ಇಪ್ಪತ್ತೈದು ಸಾವಿರ ಜನ ಚಾಲಕರಲ್ಲಿ 1,500 ಜನ ಚಾಲಕರು ವಾಲಂಟರಿಯಾಗಿ ಬಂದು ನಾವು ಕುಡಿಯುತ್ತೇವೆ ಅದನ್ನು ನಿಲ್ಲಿಸಬೇಕೆಂದಿದ್ದೇವೆಂದು ಹೇಳಿದ್ದಾರೆ. ಅವರಿಗೆ ನಾವು ಒಂದು ಅರ್ಜಿಯನ್ನು ಕೊಟ್ಟು ನಮ್ಮ ಒಬ್ಬ ಅಧಿಕಾರಿಯನ್ನು ಅದಕ್ಕಾಗಿ ನೇಮಕ ಮಾಡಿ ರಾಜ್ಯದ ಆರು ಕಡೆಗಳಲ್ಲಿ ಡೀಅಡಿಕ್ಷನ್ ಕ್ಯಾಂಪ್‌ಗಳನ್ನು ಮಾಡಿ ಯಾರು ಕುಡಿತಕ್ಕ ಒಳಗಾಗಿದ್ದಾರೆ ಅವರಿಗೆ ಡ್ರೈವಿಂಗ್ ಕೆಲಸವನ್ನು ಕೊಡದೆ, ಅವರಿಗೆ ಕುಡಿಯುವ ಚಟವನ್ನು ಬಿಡಿಸುವ ಕೆಲಸ ಮಾಡುತ್ತಿದ್ದೇವೆ. ಆಲ್ಲಿಯವರೆಗೆ ಅವರಿಗೆ ಬೇರೆ ಕೆಲಸವನ್ನು ಕೊಡಲು ನಾನು ಕ್ರಮ ತೆಗೆದುಕೊಂಡಿದ್ದೇನೆ.

ಅಧ್ಯಕ್ಷರು: ಈ ಮಧ್ಯೆ ಪ್ರಯಾಣಿಕರ ಸುರಕ್ಷತೆಗಾಗಿ ಹೆಚ್ಚು ರೈಲುಗಳನ್ನು ಬೆಂಗಳೂರಿನಿಂದ ಮೈಸೂರಿಗೆ ಹಾಕಿಸಿದ್ದೇವೆ;

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಮುಖ್ಯಮಂತ್ರಿಯವರು ಜನತಾದಳದ ಕಾರ್ಯಕರ್ತರ ಸಭೆಯಲ್ಲಿ ಯುವಕರಿಗೆ ಆದೇಶಕೊಡುತ್ತಾ ನಮ್ಮ ವಯಸ್ಸಿನಲ್ಲಿ ಬೇಕಾದರೆ ಕುಡಿಯಿರಿ ಚಿಕ್ಕವಯಸ್ಸಿನಲ್ಲಿ ಕುಡಿದು ಹಾಳಾಗಬೇಡಿ ಎಂದು ಹೇಳಿದ್ದಾರೆ. ಆದ್ದರಿಂದ ವಯಸ್ಸಾದ ಚಾಲಕರಿಗೆ ಕುಡಿಯಬೇಡಿಯೆಂದು ಹೇಗೆ ಹೇಳುತ್ತೀರಿ?

ಶ್ರೀ ಪಿ.ಜಿ.ಆರ್.ಸಿಂಧ್ಯ: ವಯಸ್ಸಾದಮೇಲೆ ಚಾಲನೆ ಮಾಡುವಂತಿರುವುದಿಲ್ಲ. 58 ವರ್ಷ ವಯಸ್ಸಿಗೆ ನಿವೃತ್ತಿಯಾಗಿಬಿಡುತ್ತಾರೆ. ಮುಖ್ಯಮಂತ್ರಿಯವರು 65 ವರ್ಷಗಳಾದ ಮೇಲೆ ಕುಡಿಯಬಹುದು ಎಂದು ಹೇಳಿರತಕ್ಕದ್ದು.

ಅಧ್ಯಕ್ಷರು: ಅವರು ಚಾಲಕರಿಗೆ ಹೇಳಿಲ್ಲ, ಯುವಜನತಾದಳದವರಿಗೆ ಹೇಳಿದ್ದು, ಅದರ ಬಗ್ಗೆ ತಲೆಕೆಡಿಸಿಕೊಳ್ಳಲು ಏಕೆ ಹೋಗುತ್ತೀರಿ?

ಶ್ರೀ ಜೆ.ಹೆಚ್.ಪಟೇಲ್: ಈ ವಿಷಯದಲ್ಲಿ ಪರಿಜ್ಞಾನವೇ ಗೊತ್ತಿಲ್ಲದವರು ಮಾತನಾಡುತ್ತಾರಲ್ಲ ಅದಕ್ಕೆ ನಾನೇನು ಹೇಳಲಿ? ಯಡಿಯೂರಪ್ಪನವರಿಗೆ ಏನು ಗೊತ್ತಿದೆ?

ವಿಷಯ: ಆರಾಧನಾ ಯೋಜನೆಗೆ ಅನುದಾನ ಒದಗಿಸುವುದು.

498 (4029)

ಶ್ರೀ ಕೆ.ಪ್ರಕಾಶ್‌ಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಾಧನಾ ಯೋಜನೆಯಡಿಯಲ್ಲಿ ದ.ಕ. ಜಿಲ್ಲೆಗೆ ನೀಡಿದ ಅನುದಾನವೆಷ್ಟು?

ಆ) ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿ ತಾಲ್ಲೂಕಿಗೆ ಕಾದಿರಿಸಿದ ಹಣವೆಷ್ಟು; ಮತ್ತು ವೆಚ್ಚವಾದ ಹಣವೆಷ್ಟು?

ಇ) ಈ ಹಣ ವೆಚ್ಚವಾಗಿದ್ದಲ್ಲಿ ಕಾರಣವೇನು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

ಅ) 1991-97ನೇ ಸಾಲಿನಿಂದ 1996-97ನೇ ಸಾಲಿನವರೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ಒಟ್ಟು ರೂ. 2,32 ಕೋಟಿ ಅನುದಾನ ಬಿಡುಗಡೆಯಾಗಿದೆ.

ಆ) ಈ ಯೋಜನೆಯಡಿ ಹಣವನ್ನು ವಿಧಾನ ಸಭಾ ಕ್ಷೇತ್ರವಾರು ಬಿಡುಗಡೆ ಮಾಡಲಾಗುವುದು 1991-92ರಿಂದ ಈವರೆಗೆ 8 ತಾಲ್ಲೂಕಿಗೆ ಹಂಚಲಾದ ಹಾಗೂ ಖರ್ಚಾದ ಪಟ್ಟಿ ಲಗತ್ತಿಸಿದೆ.

ಇ) ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 111 ಮುಇವಿ94, ದಿನಾಂಕ: 4-1-95ರಲ್ಲಿ ಹಿಂದೆ ರಚಿಸಲಾದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಯನ್ನು ರದ್ದುಪಡಿಸಿದ ನಂತರ 1995-96ರಲ್ಲಿ ಸಮಿತಿಗಳ ರಚನೆ ಪ್ರಾರಂಭವಾದ್ದರಿಂದ ಹಾಗೂ ಕೆಲವು ಕಾಲ ಆರಾಧನಾ ಸಮಿತಿ ಅಸ್ತಿತ್ವದಲ್ಲಿ ಇರದಿದ್ದರಿಂದ ಹಾಗೂ ಯೋಜನೆ ಅನುಷ್ಠಾನದಲ್ಲಿ ಕೆಲವೊಂದು ತೊಂದರೆಗಳಿಂದ ವಿಳಂಬವಾಗುತ್ತಿದ್ದರಿಂದ ಮಂಜೂರಾಗಿ ಬಿಡುಗಡೆಯಾದ ಹಣವನ್ನು ಉಪಯೋಗಿಸಲು ನಿಧಾನವಾಗಿರುತ್ತೆ.

ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ವಿವರದ ಪಟ್ಟಿ

ಕ್ರಮ ಸಂಖ್ಯೆ	ತಾಲ್ಲೂಕು	ಕಾದಿರಿಸಿದ್ದು	ವೆಚ್ಚ	ಉಳಿಕೆ
1)	ಮಂಗಳೂರು	58,83,074-00	30,52,000-00	27,81,074-00
2)	ಬಂಟ್ವಾಳ	4,98,005-00	12,95,505-00	12,03,400-00
3)	ಪುತ್ತೂರು	16,55,805-00	12,44,000-00	4,11,805-00
4)	ಸುಳ್ಯ	10,16,282-00	7,18,300-00	39,71,282-00
5)	ಬೆಳ್ತಂಗಡಿ	14,79,748-00	12,34,000-00	2,45,748-00
6)	ಕಾರ್ಕಳ	34,93,905-00	21,39,600-00	13,54,305-00

7) ಉಡುಪಿ	43,85,635-00	12,56,960-00	31,28,675-00
8) ಕುಂದಾಪುರ	28,35,841-00	8,77,380-00	19,58,461-00
	2,31,99,305-00	1,18,18,645-00	1,13,80,660-00

ಶ್ರೀ ಎ.ಟಿ.ರಾಮಸ್ವಾಮಿ (ಪ್ರತಾಪ್‌ಚಂದ್ರ ಶೆಟ್ಟಿಯವರ ಪರವಾಗಿ):- ಸನ್ಮಾನ್ಯ ಅಧ್ಯಕ್ಷರೆ, ಈ ಆರಾಧನಾ ಯೋಜನೆ ಒಂದು ಮಹತ್ತರವಾದ ಯೋಜನೆ, ಇದು 1991-92ನೇ ಸಾಲಿನಲ್ಲಿ ಪ್ರಾರಂಭವಾಯ್ತು. ಇದು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ದಕ್ಷಿಣಕನ್ನಡ ಜಿಲ್ಲೆಗೆ 231 ಕೋಟ ರೂಪಾಯಿಗಳು ಹಣ ಬಿಡುಗಡೆ ಆಗಿದೆ. ಆ ಹಣದಲ್ಲಿ ಅರ್ಧ ಭಾಗ ಮಾತ್ರ ಖರ್ಚು ಆಗಿದೆ. ಉಳಿದ ಜಿಲ್ಲೆಗಳಲ್ಲೂ ಸಹ ಇದೇ ಪರಿಸ್ಥಿತಿ ಇದೆ. ಇದು ತಮಗೆ ಗೊತ್ತಿದ್ದ ಹಾಗೆ ಅಲ್ಪಸಂಖ್ಯಾತರರ, ಹಿಂದುಳಿದ ವರ್ಗದವರ, ಹರಿಜನ ಗಿರಿಜನ ಕೇರಿಯವರ ನೈತಿಕ ಮಟ್ಟವನ್ನು ಉತ್ತಮ ಮಾಡಲಿಕ್ಕೆ ಈ ಯೋಜನೆಗಳನ್ನು ರೂಪಿಸಿರುವುದು. ಈ ಯೋಜನೆಯ ಅನುದಾನದಲ್ಲಿ ಕೆಲವೊಂದು ತೊಂದರೆಗಳಿಂದ ವಿಳಂಬವಾಗುತ್ತಿದೆ ಎಂದು ಈಗ ತಾವು ಹೇಳಿದಿರಿ ತೊಂದರೆಗಳು ಯಾವುವು ಅವನ್ನು ನಿವಾರಣೆ ಮಾಡಲಿಕ್ಕೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ?

ಶ್ರೀ ರಮೇಶ್.ಸಿ.ಜಿಗಜಿಣಗಿ:- 4-1-95ರಿಂದ ಈ ಸಮಿತಿಗಳೆಲ್ಲಾ ರದ್ದು ಆಗಿದ್ದವು. ರದ್ದು ಆಗಿದ್ದರಿಂದ ಕೆಲಸಗಳೆಲ್ಲಾ ನಿಂತು ಹೋಗಿವೆ ಎಲ್ಲಾ ಜಿಲ್ಲೆ ತಾಲ್ಲೂಕುಗಳಲ್ಲಿ ಜಿಲ್ಲಾ ಕಮಿಟಿಗಳನ್ನು ಮಾಡಿ ಸಾಧ್ಯವಾದಷ್ಟು ಬೇಗ ಈ ಕೆಲಸಗಳನ್ನು ಮುಗಿಸಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎ.ಟಿ.ರಾಮಸ್ವಾಮಿ:- ಸಮಿತಿ ಇಲ್ಲದೇ ಇರುವ ಕಡೆ ಈ ಸಮಸ್ಯೆ ಆಗಿದೆ. ಸಮಿತಿ ಇರೋ ಕಡೆ, ಸಮಿತಿಯ ಕರ್ತವ್ಯ ಮಾಡಬೇಕಾಗುತ್ತದೆ. ಈ ಆರಾಧನ ಯೋಜನೆಯಡಿಯಲ್ಲಿ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರ್ಣಯ ತೆಗೆದುಕೊಂಡ ಮೇಲೆ ಅದನ್ನು ಅನುಷ್ಠಾನ ಮಾಡತಕ್ಕ ಅಧಿಕಾರಿಗಳಿಂದ ಅದು ಆರ್ಥಿಕ ಮಂಜೂರಾತಿ ಇರಬಹುದು, ತಾಂತ್ರಿಕ ಮಂಜೂರಾತಿ ಇರಬಹುದು, ಅದನ್ನು ಕೊಡುವುದರಲ್ಲಿ, ಅನುಷ್ಠಾನ ಮಾಡುವುದರಲ್ಲಿ ವಿಳಂಬವಾಗುತ್ತಿದೆ. ಅದು ಕೂಡ ನಿಮ್ಮ ಗಮನಕ್ಕೆ ಬಂದಿರಬಹುದು. ಆ ವಿಳಂಬ ನೀತಿಯನ್ನು ತಪ್ಪಿಸಿ ಜರೂರಾಗಿ ಕಾರ್ಯಕ್ರಮ ಅನುಷ್ಠಾನ ಆಗಲಿಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ತಿಳಿಸಿ.

ಶ್ರೀ ರಮೇಶ್.ಸಿ.ಜಿಗಜಿಣಗಿ:- ಮಾನ್ಯ ಸದಸ್ಯರು ಹೇಳಿದ್ದರಲ್ಲಿ ನಿಜ ಇದೆ. ಆದುದರಿಂದ ಬೇಗ ಬೇಗ ಕಾರ್ಯಕ್ರಮಗಳನ್ನು ಮುಗಿಸಬೇಕು ಎಂದು ಹೇಳಿ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ.

ಶ್ರೀ ಕುಂಬ್ಳೆ ಸುಂದರ್‌ರಾವ್:- ಆರಾಧನ ಸಮಿತಿಯಲ್ಲಿ ಮುಸ್ಲಿಂ ಬಂಧುಗಳಿಗೆ ಕ್ರಿಶ್ಚಿಯನ್ ಬಂಧುಗಳಿಗೆ ಮತ್ತು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ ಕೊಡಬೇಕು ಎನ್ನುವ ಕಂಡೀಶನ್ ಏನಿದೆ, ಅದರಿಂದ ಬಹಳ ತೊಂದರೆ ಆಗುತ್ತಿದೆ ಎಂದು ನಾನು ಭಾವಿಸುತ್ತೇನೆ. ಮುಸ್ಲಿಂ ಬಂಧುಗಳಿಗೆ ಪ್ರತ್ಯೇಕವಾದ ಅನುದಾನವನ್ನು ಪಡೆಯುವ ವ್ಯವಸ್ಥೆ ಇದೆ. ಕ್ರಿಶ್ಚಿಯನ್ ಬಂಧುಗಳು ಚರ್ಚಿಗಾಗಿ ಹಣ ಪಡೆಯುವ ಸಂದರ್ಭ ಬಹಳ ಕಡಿಮೆ ಇದೆ. ಇದು ನನ್ನ ಕ್ಷೇತ್ರದ ಅನುಭವವನ್ನು ಹೇಳುತ್ತಿದ್ದೇನೆ. ಈ ಹರಿಜನ ಗಿರಿಜನ ಬಂಧುಗಳು ಏನಿದ್ದಾರೆ ಅವರಿಗೆ ಒಂದು ಕೆಲಸ ಕೊಟ್ಟರೆ, ಅವರ ಕೆಲಸ ಮುಗಿಯುತ್ತದೆ. ಅಥವಾ ಎರಡು ಸಲ ಕೊಟ್ಟರೆ ಅವರ ಮುಂದಿರದ ಕೆಲಸಮುಗಿಯುತ್ತದೆ. ಆದರೆ ಉಳಿದ ಜಾತಿಯವರು ಯಾರಿದ್ದಾರೆ, ಕೆಳವರ್ಗದವರು, ಬಡವರು ಅವರಿಗೂ ಈ ಹಣವನ್ನು ಪಡೆಯುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡುತ್ತದೆಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ:- ಜನರಲ್ ಆಗಿ ಎಲ್ಲರಿಗೂ ಈ ಅವಕಾಶ ಇದೆ.

ಶ್ರೀ ಸುಂದರ್‌ರಾವ್ ಕುಂಬಳೆ: ಇಲ್ಲ, ನಮ್ಮಲ್ಲಿ ಎಲ್ಲರಿಗೂ ಕೊಡುತ್ತಿಲ್ಲ. ಇದೆ ಎಂದು ಹೇಳುವುದಕ್ಕೆ ಒಂದು ಸುತ್ತೋಲೆಯನ್ನು ಹೊರಡಿಸಿ.

ಶ್ರೀ ಡಿ.ವಿ.ಸದಾನಂದಗೌಡ:- ಈಗ ನನ್ನದೊಂದು ಪ್ರಶ್ನೆ ಈ ಆರಾಧನೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಹಣ ಖರ್ಚಾಗಿದೆ. ಉಳಿದ ಯಾವ ಯಾವ ತಾಲ್ಲೂಕಿನಲ್ಲಿ ಹಣ ಖರ್ಚಾಗದೆ ಉಳಿದಿದೆ ಅಂತಹಕಡೆ ಕೊಡುವುದಕ್ಕೆ ಸರ್ಕಾರದ ಅಭ್ಯಂತರ ಏನಾದರೂ ಇದೆಯೆ? ಕೆಲವು ತಾಲ್ಲೂಕುಗಳಲ್ಲಿ ನೀವು ಬಿಡುಗಡೆ ಮಾಡಿರತಕ್ಕ ಹಣವನ್ನೂ ಖರ್ಚು ಮಾಡಿಲ್ಲ. ಯಾರು ಖರ್ಚು ಮಾಡಿದ್ದಾರೆ, ಯಾರಿಗೆ ಇನ್ನೂ ಅಪೇಕ್ಷೆ ಇದೆ ಅವರ ಕಡೆಗೆ ಡೈವರ್ಟ್ ಮಾಡಲಿಕ್ಕೆ ಸಾಧ್ಯ ಇದೆಯೇ? ಅಂಥದ್ದು ಏನಾದರೂ ಇದ್ದರೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಕಳುಹಿಸಲಿಕ್ಕೆ ನೀವು ತಯಾರು ಇದ್ದೀರೊ?

ಶ್ರೀರಮೇಶ್ ಸಿ.ಜಿಗಜಿಣಗಿ:- ಸನ್ಮಾನ್ಯ ಸದಸ್ಯರು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಎಕ್ಸಾಮಿನ್ ಮಾಡುತ್ತೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಈ ಆರಾಧನ ಯೋಜನೆಯ ಬಗ್ಗೆ ಚರ್ಚೆ ನಡೆಯುತ್ತಿದೆ. ನನ್ನ ಅನಿಸಿಕೆ ಪ್ರಕಾರ ಈ ಯೋಜನೆಯ ಫಲಾನುಭವಿಗಳು ಪರಿಶಿಷ್ಟ ವರ್ಗ ಮತ್ತು ಪಂಗಡದವರೇ ಜಾಸ್ತಿ. ಇಲ್ಲವೆ, ಹಿಂದುಳಿದವರು ಅಲ್ಪಸಂಖ್ಯಾತರೆ ಸೇರಿದ್ದು ಬಡವರು ಜಾಸ್ತಿ ಇದ್ದಾರೆ. ಆದುದರಿಂದ ಮೂಢನಂಬಿಕೆಗಳು ಜಾಸ್ತಿ ಇರುತ್ತವೆ. ಆದುದರಿಂದ, ದಯವಿಟ್ಟು ಈ ಯೋಜನೆಯನ್ನೇ ರದ್ದು ಮಾಡಬೇಕು. ಇದನ್ನು ರದ್ದು ಮಾಡಿ ಅದರ ಬದಲಿಗೆ

ಹಣವನ್ನು ಮುಜರಾಯಿ ಇಲಾಖೆಗೆ ಕೊಡಬೇಕು. ಏಕೆಂದರೆ ಪರಿಶಿಷ್ಟ ವರ್ಗ ಮತ್ತು ಪಂಗಡದವರಿಗೆ ಬಡವರಿಗೆ ಮೊದಲೇ ಮೂಢನಂಬಿಕೆ ಜಾಸ್ತಿ ಇದೆ. ಸಾಮಾನ್ಯವಾಗಿ ಯಾವುದೇ ಹಳ್ಳಿಗೆ ಹೋದರೂ ಸಹಿತ ಸಾರ್ವಜನಿಕ ಕೆಲಸಗಳಿಗಾಗಿ ಹಣವನ್ನು ಕೇಳುವುದನ್ನು ಬಿಟ್ಟು ಬಿಡುತ್ತಾರೆ, ದೇವಾಲಯಗಳನ್ನು ಕಟ್ಟಲಿಕ್ಕೆ ರಿಪೇರಿ ಮಾಡಲಿಕ್ಕೆ 10-20, 25-30 ಸಾವಿರ ರೂಪಾಯಿಗಳನ್ನು ಕೊಡಿ ಎಂದು ಕೇಳುತ್ತಾರೆ. ಪ್ರತಿ ಹಳ್ಳಿಯಲ್ಲೂ ಇದೇ ಸಮಸ್ಯೆಯಾಗಿರುವುದರಿಂದ ದಯಮಾಡಿ ಈ ಯೋಜನೆಯನ್ನು ನಮ್ಮ ಸರ್ಕಾರ ರದ್ದುಪಡಿಸಬೇಕು, ಮತ್ತು ಆ ಹಣವನ್ನು ಮುಜರಾಯಿ ಸಂಸ್ಥೆಗೆ ಕೊಡಬೇಕು.

ಶ್ರೀ ರಮೇಶ್ ಸಿ.ಜಿಗಜಿಣಗಿ:- ಇದರ ಬಗ್ಗೆ ಪರಿಶೀಲಿಸುತ್ತೇನೆ.

ಅಧ್ಯಕ್ಷರು:- ನಮ್ಮ ಆಸೆ ಏನು ಅಂದರೆ ಹೆಚ್ಚು ಹೆಚ್ಚು ಕುಮಾರಸ್ವಾಮಿಗಳಂತಹವರು ಬರಬೇಕು. ನಿಮ್ಮ ರೀತಿಯಲ್ಲಿ ಯೋಚನೆ ಮಾಡುವಂತಹ ಜನ ಬರಬೇಕು.

ವಿಷಯ: ಪುತ್ತೂರು ಡಿಪೋದಲ್ಲಿ ಕೆ.ಎಸ್.ಆರ್.ಟಿ.ಸಿ.ಬಸ್ಸುಗಳು.

407 (4053)

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ಡಿಪೋದಲ್ಲಿ ಈಗ ಒಟ್ಟು ಇರುವ ಬಸ್ಸುಗಳು ಎಷ್ಟು? ಇದರಲ್ಲಿ ಸಂಚಾರ ಯೋಗ್ಯ ಬಸ್ಸುಗಳು ಎಷ್ಟು? ರಿಪೇರಿಯಲ್ಲಿರುವ ಬಸ್ಸುಗಳು ಎಷ್ಟು?

ಆ) ಕಳೆದ (3) ಮೂರು ವರ್ಷದಲ್ಲಿ ಪುತ್ತೂರು ಡಿಪೋಗೆ ಬಂದ ಹೊಸ ಬಸ್ಸುಗಳು ಎಷ್ಟು. ಎಷ್ಟು ಹೆಚ್ಚಿನ ಬಸ್ಸುಗಳ ಅವಶ್ಯಕತೆ ಇದೆ?

ಇ) ಪುತ್ತೂರು ಡಿಪೋದಲ್ಲಿ ಪ್ರಸ್ತುತ ಖಾಲಿ ಇರುವ ಡ್ರೈವರ್, ಕಂಡಕ್ಟರ್ ಹಾಗೂ ಮೆಕ್ಯಾನಿಕ್‌ಗಳ ಹುದ್ದೆ ಎಷ್ಟು? ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):

ಅ) ಪುತ್ತೂರು ಘಟಕದಲ್ಲಿ 105 ವಾಹನ ಬಲ ಹೊಂದಿದ್ದು, ಇವುಗಳಲ್ಲಿ 2 ವಾಹನಗಳು ಲಘು ದುರಸ್ತಿಗಾಗಿ ಘಟಕದಲ್ಲಿ ನಿಂತಿದೆ. 2 ವಾಹನಗಳು ಅರ್ಹತಾ ನೋಂದಣಿಗಾಗಿ ವಿಭಾಗ ಕಾರ್ಯಾಗಾರದಲ್ಲಿ ನಿಂತಿವೆ.

ಆ) ಪುತ್ತೂರು ಘಟಕಕ್ಕೆ ಒಂದಿನ 3 ವರ್ಷಗಳಿಂದ ನೀಡಿರುವ ವಾಹನಗಳ ವಿವರ ಈ ಕೆಳಕಂಡಂತಿವೆ:-